ಒ. ಎಸ್. ಸಂಖ್ಯೆ ಃ 52/2012

ದಿನಾಂಕ : 07/03/2018
ಪಿ..ಡಬ್ಲ್ಯೂ. ಃ 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ 4 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಪಿ.ಡಿ.ಬಿ. ವಕೀಲರಿಂದ.

16. ಬಂಡೆಪ್ಪ ಅವರು ಯಾವಾಗ ತೀರಿಕೊಂಡಿದ್ದಾರೆ ಎಂದು ನಿಖರವಾಗಿ ಗೊತ್ತಿಲ್ಲ. ಬಂಡೆಪ್ಪ ಅವರಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು. ಅವರ ಪೈಕಿ ಒಬ್ಬ ಮಗ ತೀರಿಕೊಂಡರು. ಅವರ ಹಿರಿಯ ಮಗನ ಹೆಸರು ಗಣಪತಿ, 2 ನೇ ಯವರು ನಮ್ಮ ತಂದೆ, 3 ನೇ ಯವರ ಹೆಸರು ಪುಂಡಲಿಕ್. ಸದರಿ ಪುಂಡಲಿಕಗೆ ಮದುವೆ ಆಗಿರಲಿಲ್ಲ. ಬಂಡೆಪ್ಪನ ಇಬ್ಬರು ಹಣ್ಣು ಮಕ್ಕಳ ಹೆಸರು ಕಲ್ಲಮ್ಮಾ ಮತ್ತು ಗಂಗಮ್ಮಾ. ಅವರು ಈಗ ಜೀವಂತ ಇಲ್ಲ. ಅವರಿಬ್ಬರು 1990 ದಶಕದಲ್ಲಿ ತೀರಿಕೊಂಡಿರುತ್ತಾರೆ. ಕಲ್ಲಮ್ಮನಿಗೆ ಇಬ್ಬರು ಗಂಡು ಮತ್ತು 3 ಹೆಣ್ಣು ಮಕ್ಕಳು ಇರುತ್ತಾರೆ. ಅವರ ಗಂಡು ಮಕ್ಕಳ ಹೆಸರು ಶಾಂತರಾಜ ಮತ್ತು ಶಂಕರರಾವ, ಅವರ ಹೆಣ್ಣು ಮಕ್ಕಳ ಹೆಸರು ಕಮಲಮ್ಮಾ, ಚಿನ್ನುಮ್ಮಾ, ಶಾರ್ಲೆಟ್. ಅವರ ಪೈಕಿ ಅವರ ಹಿರಿಯ ಮಗ ಶಂಕರ ಅವರು ತೀರಿಕೊಂಡಿದ್ದಾರೆ. ಉಳಿದವರು ಜೀವಂತ ಇದ್ದಾರೆ. ಗಂಗಮ್ಮನಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು.

17. ಗಣಪತಿ ಅವರು 1990 ನೇ ಇಸವಿಯಲ್ಲಿ ತೀರಿಕೊಂಡರು. ಅವರಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು ಅವರ ಪೈಕಿ ಒಬ್ಬ ಮಗ ತೀರಿಕೊಂಡಿದ್ದಾರೆ. ಅವರ ಮಗ ಜೋಯೆಲ್ ಅನ್ನುವವರು ತೀರಿಕೊಂಡಿದ್ದಾರೆ. ಅವರ ಹೆಣ್ಣು ಮಕ್ಕಳ ಹೆಸರು ಮಧುಲತಾ ಮತ್ತು ಮಂಜುಳಾ. ಮೊದಲ ತಾಯಿ ಮಂಜುಳಾ ಅವರನ್ನು ಈ ಕೇಸನಲ್ಲಿ ಪಾರ್ಟಿ ಮಾಡಿಲ್ಲ ಅಂದರೆನಿಜ.

ನಮ್ಮ ತಂದೆ 2003 ನೇ ಇಸವಿಯಲ್ಲಿ ತೀರಿಕೊಂಡರು. ನಮ್ಮ ತಂದೆ ಹೈದ್ರಾಬಾದನಲ್ಲಿ ವಾಸ ಇದ್ದರು. ನಾನು ಹುಟ್ಟುವುದಕ್ಕಿಂತ ಮೊದಲೆ ನಮ್ಮ ಹೈದ್ರಾಬಾದನಲ್ಲಿ ನೆಲೆಸಿದ್ದು

ಟೀಚರ್ ಆಗಿ ಕೆಲಸ ಮಾಡಿ ಅಲ್ಲಿಯೇ ನಿವೃತ್ತಿ ಹೊಂದಿರುತ್ತಾರೆ. ನಮ್ಮ ತಂದೆ 1960 ನೇ ಇಸವಿಗಿಂತ ಮೊದಲು ಟೀಚರ್ ಆಗಿ ಕೆಲಸಕ್ಕೆ ಸೇರಿಕೊಂಡಿದ್ದು ಕರ್ನಾಟಕ ರಾಜ್ಯ ರಚನೆ ಆದಾಗ ಅವರು ಹೈದ್ರಾಬಾದನಲ್ಲಿ ಉಳಿದುಕೊಂಡರು ಅಂದರೆ ನಿಜ. ನಮ್ಮ ತಂದೆ ಖಾಸಗಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ತಾಯಿ 2010 ರಲ್ಲಿ ತೀರಿಕೊಂಡರು. ನಮ್ಮ ತಂದೆ ತಾಯಿ ಅಥವಾ ನನ್ನ ಹೆಸರು ಯಾವತ್ತೂ ಬೀದರನ ನಮ್ಮ ಊರಿನ ಮತದಾರರ ಪಟ್ಟಿಯಲ್ಲಿ ಇರಲಿಲ್ಲ ಅಂದರೆ ನಿಜ. ಸಾಕ್ಷಿಯ ಮುಂದುವರೆದು ನಮ್ಮ ತಾಯಿ ಕರ್ನಾಟಕ ಸರಕಾರದ ಆರೋಗ್ಯ ಇಲಾಖೆಯಲ್ಲಿ ನರ್ಸಿಂಗ್ ಸುಪರಿಟೆಂಡೆಂಟ್ ಎಂದು ಕೆಲಸ ಮಾಡುತ್ತಿದ್ದರು ಅಂತಾ ಹೇಳಿರುತ್ತಾರೆ.

18. ನಮ್ಮ ಅಜ್ಜ ಬಂಡೆಪ್ಪಾ ತೀರಿಕೊಂಡಾಗ ದಾವಾ ಆಸ್ತಿ ಮತ್ತು ಪೂರ್ವಜರ ಮನೆಯನ್ನು ಬಿಟ್ಟು ಹೋಗಿದ್ದಾರೆ. ಅವರು ತಮ್ಮ ಜೀವಿತ ಕಾಲದಲ್ಲಿ ನಮ್ಮ ಅಜ್ಜಿ ಹೆಸರಿಗೆ ಮಂಜೂರು ಆದ 18 ಎಕರೆಯನ್ನು ಮಾರಾಟ ಮಾಡಿರುತ್ತಾರೆ. ಸರ್ವೆ. ನಂ. 3 ನಮ್ಮ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ ಅಂದರೆ ಸುಳ್ಳು. ಸದರಿ ಆಸ್ತಿ ನಮ್ಮ ಅಜ್ಜ ಬಂಡೆಪ್ಪನ ಹೆಸರಿನಲ್ಲಿತ್ತು. ಸದರಿ ಆಸ್ತಿ ಬಂಡೆಪ್ಪನಿಗ ಹಿರಿಯರಿಂದ ಬಂದಿರಲಿಲ್ಲ. ಅಲದೆ ನಮ್ಮ ಅಜ್ಜ ಬಂಡೆಪ್ಪನ ಹೆಸರಿನಲ್ಲಿ 10–3–23 ಮತ್ತು 10–3–18 ನಂ. ನ ಖಾಲಿ ಜಾಗ ಮತ್ತು ಮನೆ ಇತ್ತು ಅಂದರೆ ನಿಜ. ನಮ್ಮ ಅಜ್ಜನ ಜೀವಿತ ಅವಧಿಯಲ್ಲಿ ಅವರ ಮಕ್ಕಳಾದ ಗಣಪತಿ ಮತ್ತು ನಮ್ಮ ತಂದೆ ತಮ್ಮ ಆಸ್ತಿಯಲ್ಲಿ ವಿಭಾಗ ಮಾಡಿಕೊಂಡಿದ್ದರು ಅಂದರೆ ಸುಳ್ಳು. ಆ ವಿಭಾಗದಲ್ಲಿ ಖಾಲಿ ಜಾಗ ಸಂಖ್ಯೆ 10–3–23 ನಮ್ಮ ತಂದೆ ಪಾಲಿಗೆ ಮತ್ತು 10–3–18 ಗಣಪತಿ ಪಾಲಿಗೆ ಕೊಟ್ಟಿದ್ದರು ಅಂದರೆ ಸರಿಯಲ್ಲ. ಆ ಹಂಚಿಕೆ ಪ್ರಕಾರ ಅವರವರ ಹೆಸರಿನಲ್ಲಿ ಖಾತಾ ಇತ್ತು ಅಂದರೆ ನನಗೆ ಮಾಹಿತಿ ಇಲ್ಲ. ನಮ್ಮ ತಂದೆ ಹೈದ್ರಾಬಾದನಲ್ಲಿ ವಾಸ ಇದುದ್ದರಿಂದ ಈ ಮೇಲೆ ಹೇಳಿದ ಖಾಲಿ ಜಾಗವನ್ನು ದಿ. 21/4/1974 ರಂದು ನೊಂದಾಯಿತ ಕ್ರಯ ಪತ್ರದ ಮೂಲಕ ಗಣಪತಿಗೆ ಮಾರಿದರು ಅಂದರೆ ಸುಳ್ಳು. ನನ್ನ ಪ್ರಕಾರ ನಮ್ಮ ತಂದೆ ಆ ಜಾಗವನ್ನು 1 ನೇ ಪ್ರತಿವಾದಿಯ ಗಂಡನಿಗೆ ಶಾಲೆ ನಡೆಸುವ ಸಲುವಾಗಿ ಜಿ ಪಿ ಎ ಮೂಲಕ ನೀಡಿದ್ದರು. ಆ ದಾಖಲೆ ಆಧಾರದ ಮೇಲೆ ಗಣಪತಿ ಅಲ್ಲಿ ಮನೆ ಕಟ್ಟಿಸಿ ಅವರವರ ಕುಟುಂಬದವರು ಆ ಮನೆಯಲ್ಲಿ ವಾಸ ಇದ್ದಾರೆ

ಅಂದರೆ ನಿಜ. ಗಣಪತಿ ಅವರ ಪಾಲಿಗೆ ಕೊಟ್ಟಿದ್ದ ಹಳೆ ಮನೆಯನ್ನು ಬಾಡಿಗೆಗೆ ಕೊಟ್ಟಿರುತ್ತಾರೆ ಅಂದರೆ ಸಂರಿಲ್ಲ. ಆ ಮನೆಯನ್ನು 1 ನೇ ಪ್ರತಿವಾದಿ ನಮ್ಮ ತಂದೆಯ ಒಪ್ಪಿಗೆ ಇಲ್ಲದೆ ಮಾರಿರುತ್ತಾರೆ. ನಮ್ಮ ತಂದೆ ಖಾಲಿ ಜಾಗವನ್ನು ಜಿ ಪಿ ಎ ಮೂಲಕ ಗಣಪತಿಗೆ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

19. ಸರ್ವೆ . ನಂ. 88/1 ರಲ್ಲಿ ಒಟ್ಟು 18 ಎಕರೆ ಚಿಲ್ಲರೆ ಜಮೀನು ಇತ್ತು. ಆ ಸರ್ವೆ ನಂ. ನಲ್ಲ ಒಟ್ಟು 35 ಎಕರೆ ಜಮೀನು ಇತ್ತು ಅಂದರೆ ನನಗೆ ಸರಿಯಾಗಿ ಮಾಹಿತಿ ಇಲ್ಲ. ಸದರಿ ಜಮೀನು ಮೊದಲು ಸಂಗಮ್ಮನ ಹೆಸರಿಲ್ಲಿ ಇತ್ತು ಅಂದರೆ ನಿಜ. ಅವರು ನನ್ನ ಅಜ್ಜಿ ಅಂದರೆ ಬಂಡೆಪ್ಪಾ ಅವರ ಹೆಂಡತಿ ಇದ್ದರು. ಸಂಗಮ್ಮಾ ಒಟ್ಟು 35 ಎಕರೆ ಜಮೀನು ಅವರಿಗೆ ಅವರ ತಂದೆಯಿಂದ ಬಂದಿತ್ತು ಅಂದರೆ ನನಗೆ ಮಾಹಿತಿ ಇಲ್ಲ. ಆದರೆ ನಮ್ಮ ತಂದೆ ಆ ಜಮೀನಿಗೆ 600 ರೂ ಕೊಟ್ಟಿದ್ದೆವು ಎಂದು ಹೇಳಿದ್ದರು. ಆ 35 ಎಕರೆ ಪೈಕಿ 17 ಎಕರೆ ಸಂಗಮ್ಮ ಹೆಸರಿನಲ್ಲಿ ಮತ್ತು ಉಳಿದ ಜಮೀನು ಅವರು ತಂದೆ ಹೆಸರಿನಲ್ಲಿ ಇತ್ತು ಅಂದರೆ ನನಗೆ ಮಾಹಿತಿ ಲಲ್ಲ. ನಮ್ಮ ಅಜ್ಜಿ ಸಂಗಮ್ಮಾ 1983 ನೇ ಇಸವಿಯಲ್ಲಿ ತೀರಿಕೊಂಡರು ಅಂದರೆ ನಿಜ. ಅವರು ತೀರಿಕೊಂಡ ನಂತರ ಅವರಿಗೆ ಸಂಬಂದಿಸಿದ ಜಮೀನಿಗೆ 1986 ನೇ ಇಸವಿಯಲ್ಲಿ ಅವರ ಇಬ್ಬರು ಮಕ್ಕಳಾದ ಗಣಪತಿ ಮತ್ತು ಸಂಬಾಜಿ ಹಸರಿಗೆ ಮ್ಯುಟೇಷನ್ ಆಯಿತು ಅಂದರೆ ನಿಜ. 1987 ನೇ ಇಸವಿಯಲ್ಲಿ ಅವರಿಬ್ಬರು ಆ ಜಮೀನನ್ನು ಮುಕರಮ್ ಶಿಂಧೆ ಅವರಿಗೆ ಮಾರಿರುತ್ತಾರೆ ಅಂದರೆ ನಿಜ. ಸರ್ವೆ. ನಂ. 88 ನಮ್ಮ ತಂದ ಜಮೀನಾಗಲಿ, ನಮ್ಮ ಅಜ್ಜ ಜಮೀನಾಗಲಿ ಇರಲಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ ಹೈದ್ರಾಬಾದನಿಂದ ಬೀದರಗೆ ಬಂದು ಆ ಜಮೀನನ್ನು ಮಾರಾಟ ಮಾಡಿ ತನ್ನ ಪಾಲಿನ ಹಣ ತಗೆದುಕೊಂಡು ವಾಪಸ್ಸು ಹೋಗಿರುತ್ತಾರೆ ಅಂದರೆ ನಿಜ. ಆ ಜಮೀನನ್ನು ಮಾರಾಟ ಮಾಡುವ ಸವುಯದಲ್ಲಿ ನಮ್ಮ ತಂದೆ ಮತ್ತು ಗಣಪತಿ ಅವರ ನಡುವೆ ಪಾಲು ಆಗಿದ್ದು ಅವರಿಬ್ಬರು ಪ್ರತ್ಯೇಕವಾಗಿ ವಾಸ ಇದ್ದರು ಅಂದರೆ ಸುಳ್ಳು.

20. ನನ್ನ ಪ್ರಕಾರ ಸರ್ವೆ ನಂ. 3 ರಲ್ಲಿ ಒಟ್ಟು 28 ಎಕರೆ 13 ಗುಂಟೆ ಜಮೀನು ಇರುತ್ತದೆ. ಆ ಜಮೀನು ಮಲ್ಕಾಪುರದಲ್ಲಿ ಇರುತ್ತದೆ. ನಾನು ಈ ದಾವೆಯನ್ನು 23 ಎಕರೆ

17 ಗುಂಟೆಗೆ ಸಲ್ಲೀಸಿದೆದೇನೆ ಅಂದರೆ 28 ಎಕರೆ ಪೈಕಿ 5 ಎಕರೆ ಜಮೀನನ್ನು ಸರಕಾರ ಭೂ ಸ್ವಾಧೀನ ಮಾಡಿಕೊಂಡಿರುತ್ತದೆ. ಈಗ ಬೀದರನ ರಿಂಗ್ ರೋಡ್ ಸರ್ವೆ ನಂ. 3 ರಲ್ಲಿ ಹಾದು ಹೋಗಿರುತ್ತದೆ ಅಂದರೆ ನಿಜ. ಸದರಿ ರಸ್ತೆಗಾಗಿ ಸುಮಾರು 2 ಎಕರೆ 17 ಗುಂಟೆ ಜಮೀನಿನಲ್ಲಿ ರಸ್ತೆ ಮಾಡಿರುತ್ತಾರೆ ಅಂದರೆ ನಿಜ. ಆ ಜಮೀನನ್ನು ಜಿಲ್ಲಾಧಿಕಾರಿ ಯಾವುದೇ ಪರಿಹಾರ ಕೊಡದೇ ರಸ್ತೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಆ ಪರಿಹಾರ ಹಣವನ್ನು ಯಾವಾಗ ಕೊಟ್ಟಿರುತ್ತಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ರಿಂಗ್ ರೋಡನ್ನು 2007–08 ನೇ ಸಾಲಿನಲ್ಲಿ ಮಾಡಿರುತ್ತಾರೆ ಅಂದರೆ ನಿಜ. ಆದ್ದರಿಂದ ಜಿಲ್ಲಾಧಿಕಾರಿ ಆ ರಸ್ತೆ ಮಾಡಲು ಉಪಯೋಗಿಸಿದ ಜಮೀನಿಗೆ ಸಂಬಂದಿಸಿದಂತೆ ಯಾರಿಗೂ ಪರಿಹಾರ ನೀಡಿಲ್ಲ ಅಂದರೆ ನನಗೆ ಗೊತ್ತಿಲ್ಲ. ಸರ್ವೆ. ನಂ. 3 ರ ಪೈಕಿ 4 ಎಕರೆ ಚಿಲ್ಲರೆ ಜಮೀನನ್ನು ಅಪ್ಪೂರ ಟ್ಯಾಂಕ್ ಕಟ್ಟಿಸಲು ಭೂ ಸ್ವಾಧೀನ ಆಗಿರುತ್ತದೆ ಅಂದರೆ ನಿಜ. ಆದಕ್ಕೆ ಸಂಬಂದಿಸಿದ ಪರಿಹಾರ ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಅವರು ನನಗೆ ಹಣ ಕೊಟ್ಟಿರಲಿಲ್ಲ. ಆ ಸರ್ವೆ ನಂ. ನ ಪೈಕಿ 1 ಎಕರೆ 17 ಗುಂಟೆ ಜಮೀನನ್ನು ಲಿಂಕ್ ರಸ್ತೆ ಮಾಡಲು ಉಪಯಾೀಗಿಸಿದ್ದಾರೆ ಅಂದರೆ ನನಗೆ ಮಾಹಿತಿ ಇಲ್ಲ. ಸದರಿ ಭೂ ಸ್ವಾದೀನಕ್ಕೆ ಸಂಬಂದಿಸಿದಂತೆ ಭೂ ಸ್ವಾಧೀನ ಅಧಿಕಾರಿಯ ಮುಂದೆ ನಾನು ಮತ್ತು ನನ್ನ ತಾಯಿ ಅರ್ಜಿ ಸಲ್ಲಿಸಿ ನಮಗೆ ಶೇ. 50 ರಷ್ಟು ಪರಿಹಾರ ಬರಬೇಕೆಂದು ಕೇಳಿದ್ದೇವೆ ಅಂದರೆ ನಿಜ. ನಾವು ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡಿರುತ್ತಾರೆ ಅಂದರೆ ನಿಜ. ಆ ಆದೇಶದ ವಿರುದ್ದ ನಾವು ಎನೂ ಕ್ರಮ ತೆಗೆದುಕೊಂಡಿಲ್ಲ ಅಂದರೆ ನಮ್ಮ ವಕೀಲರು ಸಿವಿಲ್ ಕೇಸು ಸಲ್ಲಿಸಲು ಹೇಳಿದ್ದರಿಂದ ನಾವು ಎನಾ ಕ್ರಮ ತಗೆದುಕೊಂಡಿಲ್ಲ. ಆ ಭೂಾ ಸ್ವಾಧೀನಕ್ಕೆ ಸಂಬಂದಿಸಿದಂತೆ 1 ನೇ ಪ್ರತಿವಾದಿ ಸಂಪೂರ್ಣ ಪರಿಹಾವನ್ನು ತಗೆದುಕೊಂಡಿದ್ದು ಆನಂತರ ಹೆಚ್ಚಿನ ಪರಿಹಾರ ಕುರಿತು ಅರ್ಜಿ ಸಲ್ಲಿಸಿದ್ದು ಆ ಅರ್ಜಿಯಲ್ಲಿ ಆದ ಆದೇಶದ ಮೇರೆಗೆ ಹೆಚ್ಚು ಪರಿಹಾರವನ್ನು ತಗೆದುಕೊಂಡಿರುತ್ತಾರೆ ಅಂದರೆ ನಿಜ. .

21. ನಮ್ಮ ಅಜ್ಜ ಬಂಡೆಪ್ಪ ಸರ್ವೆ. ನಂ. 3 ರ ಗೇಣಿದಾರ ಇರಲಿಲ್ಲ ಅಂದರೆ ಸುಳ್ಳು. ಗಣಪತಿ ಸರಕಾರಿ ನೌಕರ ಇದ್ದರು ಅಂದರೆ ನಿಜ. ಅವರು ದಾವಾ ಆಸ್ತಿಗೆ ಹತ್ತಿರದಲ್ಲಿ ವಾಸ ಇದ್ದರು ಅಂದರೆ ನಿಜ. ಅವರು ಮತ್ತು 1ನೇ ಪ್ರತಿವಾದಿ 1958 ನೇ ಇಸವಿಗಿಂತ ಮೊದಲಿನಿಂದಲೂ ಆ ಜಮೀನನ್ನು ಗೇಣಿ ಮಾಡುತ್ತಿದ್ದರು ಅಂದರೆ ಸರಿಯಲ್ಲ. ನಮ್ಮ

ತಂದೆ ಮತ್ತು ಗಣಪತಿ ಗೇಣಿದಾರರು ಇದ್ದರು. ನಮ್ಮ ತಂದೆ ಹೈದ್ರಾಬಾದನಲ್ಲಿ ಕೆಲಸ ಮಾಡುತ್ತಿದ್ದರಿಂದ ಮತ್ತು ಅವರು ಬೀದರಗೆ ಬಾರದೆ ಇದುದ್ದರಿಂದ ನಮ್ಮ ತಂದೆ ಮತ್ತು ಗಣಪತಿ ಒಟ್ಟಿಗೆ ಗೇಣಿ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

22. ಸರ್ವೆ. ನಂ. 3 ರ ಮಾಲೀಕ ಅಬ್ದುಲ ಜಬ್ಬಾರ ಅನ್ನುವರು ಇದ್ದರು. ಸದರಿ ಜಮೀನಿನ ಪಹಣಿಯಲ್ಲಿ 1958 ನೇ ಇಸವಿಯಿಂದಲೂ ಗಣಪತಿ ಅವರ ಹೆಸರು ಗೇಣಿದಾರ ಎಂದು ಕಾಲಂ 12 ರಲ್ಲಿ ನಮೂದು ಆಗಿರುತ್ತದೆ ಅಂದರ ನನೆಗ ಮಾಹಿತಿ ಇಲ್ಲ. ಕರ್ನಾಟಕ ಭೂ ಸುಧಾರಣೆ ಕಾಯ್ದೆ ಜಾರಿಗೆ ಬಂದ ನಂತರ ಭೂ ನ್ಯಾಯ ಮಂಡಳಿಗಳು ಸ್ಥಾಪನೆ ಆದವು ಅಂದರೆ ಸರಿ. ಸದರಿ ಕಾಯ್ದೆಯ ಪ್ರಕಾರ ಯಾರು ಜಮೀನುಗಳನ್ನು ಗೇಣಿ ಮಾಡುತ್ತಿದ್ದರು ಅವರು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಬಹುದಾಗಿತ್ತು ಅಂದರೆ ಸರಿ. ಗಣಪತಿಯ ಹೆಸರು ಪಹಣಿಯ ಕಲಂ 12 ರಲ್ಲಿ ಎಂಟ್ರಿ ಆಗಿದ್ದರಿಂದ ಅವರು ಭೂ ನ್ಯಾಯ ಮಂಡಳಿಯಲ್ಲಿ ಫಾರ್ಮ ನಂ. 7 ನ್ನು ಸಲ್ಲಿಸಿದ್ದರು ಅಂದರೆ ಕುಟುಂಬದ ಪರವಾಗಿ ಸಲ್ಲಿಸಿದ್ದರು. ನಾನು ಫಾರ್ಮ ನಂ. 7 ಅನ್ನು ನೋಡಿಲ್ಲ. ನಾನು ನಿಪಿ–1 ನ್ನು ಭೂ ನ್ಯಾಯ ಮಂಡಳಿಯಿಂದ ತಗೆದುಕೊಂಡಿದ್ದೇನೆ ಅಂದರೆ ನಿಜ. ನಾನು ಉದ್ದೇಶಪೂರ್ವಕವಾಗಿ ಫಾರ್ಮ ನಂ. 7 ರ 2 ನೇ ಪುಟವನ್ನು ತೆಗೆದುಕೊಂಡಿರುವುದಿಲ್ಲ ಅಂದರೆ ಸರಿಯಲ್ಲ. ಗಣಪತಿ ಫಾರ್ಮ 7 ಅನ್ನು ಸಲ್ಲಿಸುವಾಗ ತನ್ನ ಹೆಂಡತಿ, ಮತ್ತು ಮಕ್ಕಳ ಹೆಸರನ್ನು ಮಾತ್ರ ನಮೂದಿಸಿರುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ. ಸದರಿ ಅರ್ಜಿಯಲ್ಲಿ ನಮ್ಮ ತಂದೆಯ ಹೆಸರು ನಮೂದಿಸಿಲ್ಲ ಅಂದರೆ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ. ಗಣಪತಿ ತನ್ನ ಸ್ವಂತ ನೆರೆಯಲ್ಲಿ ಪಾರ್ಮ ನಂ. 7 ಅನ್ನು ತನ್ನ ಹಾಗೂ ತನ್ನ ಹೆಂಡತಿ ಮಕ್ಕಳ ಹೆಸರಿನಲ್ಲಿ ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ.

ನಮ್ಮ ತಂದೆ ವಕೀಲರ ಮೂಲಕ ಭೂ ನ್ಯಾಯ ಮಂಡಳಿಯಲ್ಲಿ ಹಾಜರಾಗಿ ಗಣಪತಿ ಅವರು ಸಲ್ಲಿಸಿದ್ದ ಅರ್ಜಿಯಲ್ಲಿ ತನಗೂ ಅರ್ದ ಪಾಲು ಇದೆ ಎಂದು ಪಾರ್ಟಿ ಆಗಿ ಸೇರ್ಪಡೆ ಮಾಡಲು ಅರ್ಜಿ ಸಲ್ಲಿಸಿದ್ದರು ಅಂದರೆ ನಿಜ. ನಮ್ಮ ತಂದೆ ಗೇಣಿದಾರ ಇರುವುದಿಲ್ಲ ಎಂದು ಆ ಅರ್ಜಿಯನ್ನು ವಜಾ ಮಡಿರುತ್ತಾರೆ ಅಂದರೆ ನಿಜ. ಆ ಅರ್ಜಿಯಲ್ಲಿ ನಮ್ಮ ತಂದೆ ಸದರಿ ಆದೇಶದ ವಿರುದ್ದ ಅಪೀಲು ಸಲ್ಲಿಸುವುದಾಗಿ ಹೇಳಿ ಸ್ಟೇ

ಅರ್ಜಿ ಸಲ್ಲಿಸಿದ್ದರು ಅಂದರೆ ನಿಜ. ನಮ್ಮ ತಂದೆ ಭೂ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿ ದಿ. 24/6/1997 ರಂದು ವಜಾ ಆಗಿರುತ್ತದೆ ಅಂದರೆ ನಿಜ. 1997 ರಲ್ಲಿ ನಮ್ಮ ತಂದೆಯ ಗೇಣಿದಾರಿಕೆ ಮತ್ತು ಹಕ್ಕನ್ನು 1 ನೇ ಪ್ರತಿವಾದಿ ನಿರಾಕರಿಸಿದ್ದರು ಅಂದರೆ ನಿಜ. ಸದರಿ ಆದೇಶವನ್ನು ಇವತ್ತಿನ ವರೆಗೆ ನಮ್ಮ ತಂದೆ, ತಾಯಿಯಗಲಿ ಅಥವಾ ನಾನಾಗಲಿ ಪ್ರಶ್ನಿಸಿಲ್ಲ ಅಂದರೆ ನಿಜ. ಆದರೆ ನಮಗೆ ಸಿವಿಲ್ ಕೋರ್ಟನಲ್ಲಿ ವಿಭಾಗ ಕೇಳಲು ವಕೀಲರು ಸಲಹೆ ಮಾಡಿದ್ದರಿಂದ ಅದನ್ನು ಪ್ರಶ್ನಿಸಿಲ್ಲ. ನಮ್ಮ ತಂದೆ ದಾವಾ ಆಸ್ತಿಯಲ್ಲಿ ಪಾಲು ಕೇಳಿ ಸಲ್ಲಿಸಿದ್ದ ಅರ್ಜಿ ಮೇಲಿನ ಆದೇಶ 1997 ನೇ ಇಸವಿಯಲ್ಲಿ ಅಂತಿಮವಾಗಿ ಇರುತ್ತದೆ ಅಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯು ನಮ್ಮ ತಂದೆಯ ಹಕ್ಕನ್ನು ತಿರಸ್ಕರಿಸಿದಾಗ ಅಂದರೆ 1997 ನೇ ಇಸವಿಯಲ್ಲಿ ನಮಗೆ ದಾವೆ ಮಾಡಲು ಹಕ್ಕು ಪ್ರಾಪ್ತಿ ಆಗಿರುತ್ತದೆ ಅಂದರೆ ನಿಜ. ಅಲ್ಲದೇ 2012 ನೇ ಇಸವಿಯಲ್ಲಿ 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಮಾರಲು ಪ್ರಯತ್ನಿಸಿದ್ದರಿಂದ ಈ ದಾವೆ ಮಾಡಿರುತ್ತೇವೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಆಗಿದ್ದರಿಂದ ಮಧ್ಯಾಹ್ನ 3 ಗಂಟೆಗೆ ಮುಂದೂಡಲಾಯಿತು.

ಸಾಕ್ಷಿಯನ್ನು ಪುನಃ 3 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ. ಪಿ ಡಿ ಬಿ ಅವರಿಂದ.

23. ನಮ್ಮ ತಂದೆ ಭೂ ನ್ಯಾಯ ಮಂಡಳಿಗೆ ಸಲಿಸಿದ್ದ ಅರ್ಜಿ ತಿರಸ್ಕಾರ ಆದ ನಂತರ ಸರ್ವೆ ನಂ. 3 ರಲ್ಲಿನ ಜಮೀನು 1 ನೇ ಪ್ರತಿವಾದಿಗೆ ಅವರು ಸ್ವಂತ ನೆಲೆಯಲ್ಲಿ ವೈಯಕ್ತಿಕವಾಗಿ ಮಂಜೂರು ಆಗಿರುತ್ತದೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಗೇಣಿ ಮಂಜೂರು ಆದ ಅದೇಶವನ್ನು ನಾವು ಪ್ರಶ್ನಿಸಿಲ್ಲ ಅಂದರೆ ನಿಜ. ಸದರಿ ಜಮೀನು ಅವರಿಗೆ ಮಂಜೂರು ಆದ ನಂತರ ನಮ್ಮ ತಂದೆ ಡಿಸಿ ಆಫೀಸನಲ್ಲಿ ರಿವಿಜನ್ ಅರ್ಜಿ ಸಲ್ಲಿಸಿ ತನ್ನ ಹೆಸರನ್ನು ಅವರ ಹೆಸರಿನ ಜೊತೆ ಆರ್ ಒ ಆರ್ ನಲ್ಲಿ ಸೇರಿಸಬೇಕು ಎಂದು ಕೇಳಿಕೊಂಡಿದ್ದರು ಅಂದರೆ ನಿಜ. ಸದರಿ ರಿವಿಜನ್ ಅರ್ಜಿಯಲ್ಲಿ 1 ನೇ ಪ್ರತಿವಾದಿಯ ಗಂಡ ನಮ್ಮ ತಂದೆಗೆ ಹಕ್ಕೇನೂ ಇಲ್ಲ ಎಂದು ತಕರಾರು ಸಲಿಸಿರುತ್ತಾರೆ ಅಂದರೆ ಇರಬಹುದು. ಸದರಿ ಅರ್ಜಿಯಲ್ಲಿ ಉಭಯ ಪಕ್ಷಗಾರರ ವಾದ ಕೇಳಿದ ನಂತರ ಡಿಸಿ ಅವರು ನಮ್ಮ ತಂದೆಗೆ ಹಕ್ಕಿಲ್ಲ ಎಂದು ಅರ್ಜಿಯನ್ನು ತಿರಸ್ಕರಿಸಿರುತ್ತಾರೆ ಅಂದರ

ಗೊತ್ತಿಲ್ಲ. ಸದರಿ ಆದೇಶದ ವಿರುದ್ದ. ಅಪೀಲು ಸಲ್ಲಿಸಿರುವುದಿಲ್ಲ ಅಂದರೆ ನಿಜ. ಆದರೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಡಿಸಿ ಅವರ ಆದೇಶ 1998 ನೇ ಇಸವಿಯಲ್ಲಿ ಅಗಿದ್ದು ಈ ದಾವೆಯನ್ನು 14 ವರ್ಷಗಳ ನಂತರ ಸಲ್ಲಿಸಿದ್ದೇವೆ ಅಂದರೆ ನಿಜ. ಭೂ ನ್ಯಾಯ ಮಂಡಳಿಯ ಆದೇಶದ ಮೇರೆಗೆ 1 ನೇ ಪ್ರತಿವಾದಿ ಯ ಹಸರು ಆರ್ ಒ ಆರ್ ನ ಕಲಂ 9 ಮತ್ತು 12 ರಲ್ಲಿ ಮಾಲೀಕರು ಮತ್ತು ಕಬ್ಜೆದಾರರು ಎಂದು ನಮೂದು ಆಗಿರುತ್ತದೆ ಅಂದೆರ ಸರಿ.

24. ಭೂ ನ್ಯಯ ಮಂಡಳಿಯಿಂದ ಗೇಣಿ ಮಂಜೂರು ಆದ ನಂತರ ತಹಶೀಲ್ದಾರರು ಪಾರ್ಮ ನಂ. 10 ನ್ನು ನೀಡಿ ಪ್ರಿಮಿಯಮ್ ನಿಗದಿ ಪಡಿಸಿರುತ್ತಾರೆ ಅಂದರೆ ನಿಜ. 1 ನೇ ಪ್ರತಿವಾದಿ ಆ ಪ್ರಿಮಿಯವ್ ಹಣ ಪಾವತಿಸಿದ ನಂತರ ಅವರ ಹೆಸರು ಪಹಣಿಯಲ್ಲಿ ನಮೂದು ಆಗಿರುತ್ತದೆ ಅಂದರೆ ಇರಬಹುದು. ದಾವಾ ಆಸ್ತಿಯ ಪೈಕಿ ಡಿಸಿ ಅವರ ರಿಂಗ್ ರೋಡ್ ಮಾಡಲು 2 ಎಕರ 17 ಗುಂಟೆ ವಶ ಪಡಿಸಿಕೊಂಡಿದ್ದು ಅವರನ್ನು ಈ ಕೇಸನಲ್ಲಿ ಪಾರ್ಟಿ ಮಾಡಿಲ್ಲ ಅಂದರೆ ನಿಜ. ಆ ಜಮೀನನ್ನು ಈ ಕೇಸನಲ್ಲಿ ಸೇರಿಸಿರುತ್ತೇವೆ ಅಂದರೆ ನಿಜ. ಈಗ ಸ್ಥಳದಲ್ಲಿ 23 ಎಕರೆ 17 ಗುಂಟೆ ಜಮೀನು ಇರುವುದಿಲ್ಲ ಅಂದರೆ ನನಗೆ ಮಾಹಿತಿ ಇಲ್ಲ. ಈಗ ವಾಸ್ತವವಾಗಿ 21 ಎಕರೆ ಜಮೀನು ಮಾತ್ರ ಇರುತ್ತದೆ ಅಂದರೆ ಇರಬಹುದು.

25. 2009 ನೇ ಇಸವಿಯಲ್ಲಿ 1 ನೇ ಪ್ರತಿವಾದಿ ದಾವಾ ಆಸ್ತಿಯ ಪೈಕಿ 11 ಎಕರೆ ಜಮಿನನ್ನು ನೊಂದಾಯಿತ ಕ್ರಯ ಕರಾರು ಪತ್ರದ ಮೂಲಕ ಮಾರಾಟ ಮಾಡಿ ಕಬ್ಜೆ ಕೊಟ್ಟಿರುತ್ತಾರೆ ಅಂದರೆ ನಿಜ. ಆ ಜಮೀನಿನ ಕಬ್ಜೆ ಕೊಟ್ಟಿರುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ. ಆ ಜಮೀನನ್ನು 32,34,000/– ರೂ. ಕ್ರಯ ಹಣಕ್ಕೆ ಮಾರಿರುತ್ತಾರ ಅಂದರೆ ಸರಿಯಲ್ಲ. ಆದರೆ 47 ಲಕ್ಷ ರೂ. ಗೆ ಮಾರಿರುತ್ತಾರೆ. ಆ ಕ್ರಯದ ಹಣದ ಪೈಕಿ 1 ನೇ ಪ್ರತಿವಾದಿ 4 ನೇ ಪ್ರತಿವಾಯಿಂದ 15 ಲಕ್ಷ ರೂ. ತೆಗೆದುಕೊಂಡಿರುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ. ಆ ಜಾಗದಲ್ಲಿ 4 ನೇ ಪ್ರತಿವಾದಿ ಈಗಾಗಲೇ ಫಾರ್ಮ ಹೌಸ್ ಮಾಡಿಕೊಂಡಿರುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ. 4 ನೇ ಪ್ರತಿವಾದಿ ಆ ಜಮೀನಿನ ಕಬ್ಜೆಯಲ್ಲಿರುತ್ತಾರೆ ಅಂದರೆ ಗೊತ್ತಿಲ್ಲ.

26. ಅದೇ ಪ್ರಕಾರ 1 ನ ಪ್ರತಿವಾದಿ ದಾವಾ ಆಸ್ತಿಯ ಪೈಕಿ ಉಳಿದ 10 ಎಕರೆ ಜಮೀನನ್ನು ನೊಂದಾಯಿತ ಕ್ರಯ ಕರಾರು ಪತ್ರದ ಮೂಲಕ 5 ನೇ ಪ್ರತಿವಾದಿಗೆ ಮಾರಾಟ ಮಾಡಿ ಆ ಜಮೀನಿಗೆ ಕಬ್ಜೆ ಕೊಟ್ಟಿರುತ್ತಾರೆ ಅಂದರೆ ನನಗೆ ಮಾಹಿತಿ ಇಲ್ಲ. ಆ ಜಮೀನನ್ನು 39,40,000/– ರೂ. ಮಾರಿರುತ್ತಾರೆ ಅಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ಅವರಿಂದ 15 ಲಕ್ಷ ರೂ. ಕ್ರಯ ಹಣ ತಗೆದುಕೊಂಡಿರುತ್ತಾರೆ ಅಂದರೆ ಗೂತ್ತಿಲ. 2009 ನೇ ಇಸವಿಯಿಂದ 4 ಮತ್ತು 5 ನೇ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜೆಯಲ್ಲಿ ಇರುತ್ತಾರೆ ಅಂದರೆ ಗೊತ್ತಿಲ್ಲ.

27. 4 ಮತ್ತು 5 ನೇ ಪ್ರತಿವಾದಿಯರು ಆ ಆಸ್ತಿಯನ್ನು ಖರೀದಿಸುವುದಕ್ಕಿಂತ ಮೊದಲು ಆ ಜಮೀನು ಗಣಪತರಾವ ಅವರಿಗೆ ಮಂಜೂರು ಆದ ಬಗ್ಗೆ ಮತ್ತು ಅನಂತರ 1 ನೇ ಪ್ರತಿವಾದಿಯು ಆ ಜಮೀನಿನ ಮಾಲೀಕರು ಇದ್ದ ಬಗ್ಗೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಅವರು ಮಾಲೀಕರು ಎಂದು ಖಾತ್ರ ಪಡಿಸಿಕೊಂಡು ಕ್ರಯ ಕರಾರು ಪತ್ರ ಮಾಡಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ.

28. ಈ ದಾವೆಯನ್ನು 6 ನೇ ಪ್ರತಿವಾದಿಯ ವಿರುದ್ದ ಸಲ್ಲಿಸಿರುತ್ತೇನೆ ಅಂದರೆ ನಿಜ. ಅವರು ದಾವಾ ಅಸ್ತಿಗೆ ಆಗಲಿ ಅಥವಾ ನಮ್ಮ ಕುಟುಂಬದವರಿಗೆ ಸಂಬದಂಸಿದವರಲ್ಲ ಅಂದರೆ ಸರಿಯಲ್ಲ. 1 ನೀ ಪ್ರತಿವಾದಿ 6 ನೇ ಪ್ರತಿವಾದಿಯಿಂದ ಸಾಲ ತಗೆದುಂಡು ದಾವಾ ಆಸ್ತಿಯಲ್ಲಿ ಅರ್ದ ಕೊಡುವುದಾಗಿ ಒಪ್ಪಂದ ಮಾಡಿಕೊಂಡಿರುವುದಂರಿದ ಅವರನ್ನ ಪಾರ್ಟಿ ಮಾಡಿರುತ್ತೆನೆ. ಆ ಬಗ್ಗೆ ನಾನು ದಾಖಲೆ ನೋಡಿಲ್ಲ. ಈ ವಿಷಯವನ್ನು 6 ನೇ ಪ್ರತಿವಾದಿ ನಮಗೆ ಹೇಳಿದ್ದರಿಂದ ಗೊತ್ತಾಯಿತು. 1 ನೇ ಪ್ರತಿವಾದಿ 6 ನೇ ಪ್ರತಿವಾದಿಯ ಜೊತೆ ಮೌಖಿಕ ಒಪ್ಪಂದ ಮಾಡಿಕೊಂಡಿರುತ್ತಾರೆ. 6 ನೇ ಪ್ರತಿವಾದಿಯ ಹೇಳಿಕ ಮೇರೆಗೆ ಅವರನ್ನು ಪಾರ್ಟಿ ಮಾಡಿರುತ್ತೇನೆ. 6 ನೇ ಪ್ರತಿವಾದಿ ನನಗೆ 1 ನೇ ಪ್ರತಿವಾದಿ ಸಾಲ ತೆಗೆದುಕೊಂಡಿದ್ದಾರೆ ಎಂದು ಸುಳ್ಳು ಹೇಳಿರುತಾರೆ ಅಂದರೆ ಸರಿಯಲ್ಲ. ಆದ್ದರಿಂದ 6 ನೇ ಪ್ರತಿವಾದಿ ಈ ಕೇಸಗೆ ಅಗತ್ಯವಾದ ಪಾರ್ಟಿ ಇರುವುದಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದಗಾಗಲಿ, ನನಗಾಗಲಿ ದಾವಾ ಆಸ್ತಿಯ ಮೇಲೆ ಹಕ್ಕು, ಹಿತಾಸಕ್ತಿ ಇರುವುದಿಲ್ಲ ಅಂದರೆ ಸುಳ್ಳು. ದಾವಾ ಆಸ್ತಿ ಬೀದರ ಟೌನದಿಂದ 3 ಕಿ. ಮೀ ದೂರದಲ್ಲಿ ಇರುತ್ತದೆ ಅಂದರೆ

ನಿಜ. ಸದರಿ ದಾವಾ ಅಸ್ತಿ ಬೀದರ ಟೌನಗೆ ಹತ್ತಿರ ಇರುವುದರಿಂದ ಮತ್ತು ಅದರ ಮಾರುಕಟ್ಟೆ ಬೆಲೆ ಜಾಸ್ತಿ ಇರುವುದರಿಂದ 1 ನೇ ಪ್ರತಿವಾದಿಯ ವಿರುದ್ದ ಸುಳ್ಳು ದಾವೆ ಮಾಡಿರುತ್ತೇನೆ ಅಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಯ ಉಳಿದ ಕ್ರಯ ಹಣ ಕೊಟ್ಟು ನೊಂದಾಯಿತ ಕ್ರಯ ಮಾಡಿಸಿಕೊಳ್ಳಲು ತಯಾರಿದ್ದರು ಸಹ ಈ ದಾವೆಯಲ್ಲಿ ತಾತ್ಕಾಲಿಕ ನಿರ್ಬಂದಕಾಜ್ಞೆ ಇರುವ ಕಾರಣ ಅವರಿಗೆ ಕ್ರಯ ಪತ್ರ ಮಾಡಿಕೊಳ್ಳಲು ಆಗಿಲ್ಲ ಅಂದರೆ 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಇರುವ ತನ್ನ ಪಾಲು ಮಾರಿಕೊಳ್ಳಲು ನನ್ನ ತಕರಾರು ಎನೂ ಇಲ್ಲ.  4 ಮತ್ತು 5 ನೇ ಪ್ರತಿವಾದಿಯರ 2009 ನೇ ಇಸವಿಯಿಂದ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುವುದಂರಿದ 1 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಬರುವ ಉತ್ಪನ್ನದಲ್ಲಿ ನಮಗೆ ಪಾಲು ಕೊಡುವ ಪ್ರಶ್ನೆ ಬರುವುದಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಪ್ರಾರಂಭದಿಂದಲೂ ದಾವಾ ಆಸ್ತಿಯ ಉತ್ಪತ್ತಿಯಲ್ಲಿ ನಮಗೆ ಯಾವುದೇ ಪಾಲು ಕೊಟ್ಟಿಲ್ಲ ಅಂದರೆ ಸುಳ್ಳು. ನನಗೆ ದಾವಾ ಅಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೆ ಇದ್ದರೂ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೇ. ಸರಿ ಇದೆ.

ಪ್ರ. ಹಿ. ಸಿವಿಲ್ ಜಡ್ಜ & ಸಿ.ಜೆ.ಎಮ್ ನ್ಯಾಯಾಧೀಶರು,
ಬೀದರ್.